ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Thursday, 8th March, 1973/Phalguna 17, 1894 S.E.

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS (TO WHICH ORAL ANSWERS WERE GIVEN)

SHIFTING OF UPPINAYAKANAHALLI VILLAGE

30. SRI B. SATHYANARAYANA SINGH (Hospet). —Will the Minister of State for Major Irrigation be pleased to state .—

(*a*) whether the T. B. Board had agreed to the proposal of shifting Uppinayakanahalli village in Mallapur Taluk by its resolution as the entire village is affected by heavy seepage :

(*b*) whether the notification under Section 4 (1) of Land Acquisition Act has been issued in order to shift Uppinayakanhalli village :

(*c*) whether it is a fact that no further steps have been taken pursuant to the above notification as the necessary amount under Land Acquisition Act, has not been remitted by the T. B. Board, if so, why;

(*d*) whether the State Government would press the T. B. Board to expedite the shifting of Uppinayakanahalli village by remitting the necessary amount as the continuation of the above village in the present site is not desirable from the health point of view ?

SRI H. N. NANJE GOWDA (Minister of State for Major Irrigation).

(*a*) Yes.

(*b*) Yes.

(*c*) The Tungabhadra Board have called for a joint inspection of the village by the Engineering, Health and Revenue Department Officers.

(*d*) The Tungabhadra Board will be requested to expedite the joint report of the officers.

ಶ್ರೀ ಬಿ. ಸತ್ಯನಾರಾಯಣ ಸಿಂಗ್ .—ತಮ್ಮ ಉತ್ತರದಲ್ಲಿ (ಎ) ಮತ್ತು (ಬಿ)ಗೆ 'ಹೌದು' ಎಂದು ಹೇಳಿದ್ದೀರಿ ಇದೆಲ್ಲಾ ಆದ ನಂತರ ಪುನಃ ತುಂಗಾಭದ್ರಾ ಬೋರ್ಡಿನವರು ಹೆಲ್ತ್, ಇಂಜಿನಿಯರಿಂಗ್ ಇಲಾಖೆ ಮತ್ತು ಕಂದಾಯಾಧಿಕಾರಿಗಳನ್ನು ತನಿಖೆ ಮಾಡಲು ಕೋರುವ ಅವಶ್ಯಕತೆ ಏನು? ಮತ್ತು ಇದಕ್ಕೆ ಕಾರಣವೇನು ಎಂದು ತಿಳಿಸುತ್ತೀರಾ?

†ಶ್ರೀ ಎಚ್. ಎನ್. ನಂಜೇಗೌಡ .—ರಿಸರ್ವಾಯರ್ ಲೆವೆಲ್ (ಆರ್.ಎಲ್.) ೧೬೩೧ ಇದೆ. ಅವರು ಕೆಲವು ಹಟ್‌ಮೆಂಟ್ಸ್‌ಗೆ ತೊಂದರೆಯಾಗುವ ಸಂದರ್ಭ ಇದೆ ಎಂದು ಲೆಕ್ಕ ಹಾಕಿದ್ದಾರೆ. ಆದಕ್ಕೆ ಮೂರು ಇಲಾಖೆಯವರು ಹೋಗಿ ತನಿಖೆ ಮಾಡಬೇಕೆಂದು ಹೇಳಿದ್ದಾರೆ. ಈ ಉದ್ದೇಶಕ್ಕೆ ಮೊದಲು ಎರಡು ಲಕ್ಷ ರೂಪಾಯಿ ಇಟ್ಟಿದ್ದರು. ಈಗ ೧೦ ಲಕ್ಷ ರೂಪಾಯಿ ಆಗುತ್ತದೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ .—ಇದರ ಬಗ್ಗೆ ತುಂಗಭದ್ರಾ ಬೋರ್ಡು ಆಜ್ಞೆ ಮಾಡಿದೆಯೇ? ಅಥವಾ ಅಧಿಕಾರಿಗಳು ಆಜ್ಞೆ ಮಾಡಿದ್ದಾರೆಯೇ? ಮತ್ತು ಎರಡನೆಯದು ಮೊದಲು ಇದನ್ನು ಒಪ್ಪಿಕೊಂಡಿದ್ದಾರೆ. ಹಾಗಿದ್ದರೆ ಮೊದಲು ಈ ಅಂಶ ಅವರ ಗಮನಕ್ಕೆ ಬಂದಿರಲಿಲ್ಲವೇ? ಹೊಸತಾಗಿ ಈಗ ಮಾಡುವುದಕ್ಕೆ ಕಾರಣವೇನು?

ಶ್ರೀ ಎಚ್. ಎನ್. ನಂಜೇಗೌಡ .—ಇದೊಂದೇ ಹಳ್ಳಿಯಲ್ಲ; ಬೇರೆ ಈ ರೀತಿಯ ಹಳ್ಳಿಗಳಿದ್ದರೂ ಅವುಗಳ ಬಗ್ಗೆಯೂ ಸಹ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ .—ಉಪ್ಪಿನಾಯಕನಹಳ್ಳಿ ಸ್ಥಳಾಂತರಿಸಬೇಕೆಂದು ತಿಳಿಸಿದ್ದೀರಿ ಈ ಊರಿನಲ್ಲಿ ಎಷ್ಟು ಜಮೀನು ಇದೆ, ಎಷ್ಟು ಮುಳುಗಡೆಯಾಗುತ್ತವೆ, ಮತ್ತು ವಾಟರ್ ಸ್ವಡೆಗೂ ಹಳ್ಳಿಗೂ ಎಷ್ಟು ದೂರ ಇದೆ?

ಶ್ರೀ ಎಚ್. ಎನ್. ನಂಜೇಗೌಡ .—೧೬೩೬ (ಆರ್.ಎಲ್.) ವಾಟರ್ ರಿಸರ್ವಾಯರ್ ಲೆವೆಲ್ ಇದೆ. ಆದು ಒಂದು ಕರ್ವ ಆಗಿ ಬರುತ್ತದೆ ಒಂದು ಅಲೆ ಬಂದರೂ ಹೊಡೆಯುತ್ತದೆ. ಅದಕ್ಕೋಸ್ಕರ ಅದನ್ನು ಸ್ಥಳಾಂತರಿಸಬೇಕೆಂದು ಮಾಡಿದ್ದಾರೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ .—ಈಗಾಗಲೇ ನಾನು ಕೇಳಿದಂತೆ, ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ತುಂಗಭದ್ರಾ ಬೋರ್ಡು ನಿರ್ಣಯ ಮಾಡಿದ್ದೋ ಅಥವಾ ಅಧಿಕಾರಿಗಳೇ? ಎರಡನೆಯದ ಏನೆಂದರೆ ಅಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ಇದನ್ನು ಅಂತಿಮವಾಗಿ ಯಾವಾಗ ಮಾಡುತ್ತೀರಿ?

ಶ್ರೀ ಎಚ್. ಎನ್. ನಂಜೇಗೌಡ .—ಅತೀ ಜಾಗ್ರತೆಯಾಗಿ ಈ ವಿಷಯದಲ್ಲಿ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ.

Asterisks indicate that remarks or speaches have not been revised by the member concerned.